ಮುಧೋಳ ಆರೋಗ್ಯ ಕೇಂದ್ರದಲ್ಲಿ ಖಾಲಿ ಹುದ್ದೆಗಳು
37 : (263)

ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ)

ಅ) ಸೇಡಂ ತಾಲ್ಲೂಕಿನ ಮುಧೋಳ ಸಮುದಾಯ ಆರೋಗ್ಯ ಕೇಂದ್ರದಲ್ಲಿ ವೈದ್ಯರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಹಾಗಿದ್ದಲ್ಲಿ, ಸದರಿ ಕೇಂದ್ರಕ್ಕೆ ಮಂಜೂರಾಗಿರುವ ವೈದ್ಯರ ಹುದ್ದೆಗಳೆಷ್ಟು ಕೆಲಸ ನಿರ್ವಹಿಸುತ್ತಿರುವ ವೈದ್ಯರೆಷ್ಟು; ಖಾಲಿ ಇರುವ ಹುದ್ದೆಗಳೆಷ್ಟು ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಎಷ್ಟು ದಿವಸಗಳಲ್ಲಿ ಭರ್ತಿ ಮಾಡಲಾಗುವುದು ?

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿ)

ಅ) ಬಂದಿದೆ.

ಆ) ಮುಧೋಳ ಸಮುದಾಯ ಆರೋಗ್ಯ ಕೇಂದ್ರವು 30 ಹಾಸಿಗೆಗಳ ಸಾಮರ್ಥ್ಯದಲ್ಲಿ ಹೊಂದಿದ್ದು. ಸದರಿ ಕೇಂದ್ರಕ್ಕೆ 3 ತಜ್ಞ ವೈದ್ಯರ ಹುದ್ದೆಗಳು (ಅಂದರೆ, ಜನರಲ್ ಮೆಡಿಸನ್, ಜನರಲ್ ಸರ್ಜರಿ ಮತ್ತು ಸ್ತ್ರೀ ರೋಗ ತಜ್ಞತೆ). 2 ಹಿರಿಯ ವೈದ್ಯಾಧಿಕಾರಿಗಳ ಹುದ್ದೆಗಳು ಹಾಗೂ ಒಂದು ದಂತ ವೈದ್ಯಾಧಿಕಾರಿ ಹುದ್ದೆ ಮಂಜೂರಾಗಿವೆ. ಪ್ರಸ್ತುತ ಸದರಿ ಕೇಂದ್ರದಲ್ಲಿ ಒಬ್ಬರು ಹಿರಿಯ ವೈದ್ಯಾಧಿಕಾರಿ ಮಾತ್ರ ಕಾರ್ಯನಿರ್ವಹಿಸುತ್ತಿದ್ದು. ಉಳಿದ ಹುದ್ದೆಗಳು ಖಾಲಿಯಿವೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಸ್ಪತ್ರೆ / ಕೇಂದ್ರಗಳಲ್ಲಿ ತಜ್ಞ ವೈದ್ಯರ ತೀವ್ರ ಕೊರತೆಯಿದೆ. ಒಟ್ಟು 600 ತಜ್ಞ ವೈದ್ಯರ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ನೇರ ನೇಮಕಾತಿಯಿಂದ ಭರ್ತಿ ಮಾಡಲು ಇತ್ತೀಚೆಗೆ ಕ್ರಮ ಕೈಗೊಳ್ಳಲಾಗಿ ಕೇವಲ 252 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ಆಯ್ಕೆಯಾದ ಎಲ್ಲಾ 252 ಅಭ್ಯರ್ಥಿಗಳನ್ನು ಕೌನ್ಸಿಲಿಂಗ್ ನಡೆಸುವ ಮೂಲಕ ಸ್ಥಳ ನಿಯುಕ್ತಿ ಮಾಡಲು ಕ್ರಮ ವಹಿಸಲಾಗಿ, ಕೇವಲ 137 ಅಭ್ಯರ್ಥಿಗಳು ಮಾತ್ರ ಸ್ಥಳ ಆಯ್ಕೆ ಮಾಡಿಕೊಂಡರು. ಆ ಪೈಕಿ ಸಹ ಕೇವಲ 57 ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗಿದ್ದಾರೆ. ಮುಧೋಳ ಸಮುದಾಯ ಆರೋಗ್ಯ ಕೇಂದ್ರಕ್ಕೆ ಜನರಲ್ ಸರ್ಜರಿ ತಜ್ಞತೆಯ ಅಭ್ಯರ್ಥಿಯು ಮೇಲ್ಕಂಡ ನೇಮಕಾತಿ ಪ್ರಕ್ರಿಯೆಯಲ್ಲಿ ಸ್ಥಳ ಆಯ್ಕೆ ಮಾಡಿಕೊಂಡ ಆನ್ವಯ, ಅವರಿಗೆ ನೇಮಕಾತಿ ಆದೇಶವನ್ನುದಿನಾಂಕ:

29–2–2012 ರಂದು ನೀಡಲಾಗಿದೆ. ಆದರೆ, ಸದರಿ ಅಭ್ಯರ್ಥಿಯು ಇದುವರೆಗೆ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ.

ಮುಂದುವರೆದು, ಪ್ರಾಥಮಿಕ ಆರೋಗ್ಯ ಕೇಂದ್ರ ಯಡಗ, ಇಲ್ಲಿಂದ ಒಬ್ಬರು ವೈದ್ಯರನ್ನು ವಾರದಲ್ಲಿ ಮೂರು ದಿನಗಳ ಮಟ್ಟಿಗೆ ಮುಧೋಳ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸಲು ಹೆಚ್ಚುವರಿ ಪ್ರಭಾರದಲ್ಲಿಡಲಾಗಿದೆ.

ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈ ಹಿಂದೆ ನಡೆದಿರತಕ್ಕಂಥ ಸಭೆಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿರಲ್ಲಿ. ಆದರೆ 2008 ರಲ್ಲಿ ಹೊಸ ವಿಧಾನಸಭೆಯಾದ ಮೇಲೆ ಅಧಿವೇಶನಗಳು ಪ್ರಾರಂಭವಾದಾಗಿನಿಂದಲೂ ಕೂಡ ನಾನು ಈ ಪ್ರಶ್ನೆಯನ್ನು ಹಾಕುತ್ತಲೇ ಬಂದಿದ್ದೇವೆ. ಪ್ರತಿ ಸದನ ಸಭೆಯಲ್ಲಿಯೂ ಈ ಪ್ರಶ್ನೆಯನ್ನು ಎತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ನೀವೇ ಅದಕ್ಕೆ witness ಇದ್ದೀರಿ. ಹಿಂದೆ ಎರಡು ಸಾರಿ ಅಲ್ಲಿ ಮಂತ್ರಿಗಳಾಗಿದ್ದವರು ಇವತ್ತು ಸಾಯಂಕಾಲದೊಳಗೆ ನಾನು ಅಲ್ಲಿ ಪೋಸ್ಟಿಂಗ್ ಕೊಡಿಸುತ್ತೇನೆ ಎಂದು ಹೇಳಿದ್ದರೂ ಕೂಡ ಇಲ್ಲಿಯವರೆಗೆ ಪೋಸ್ಟಿಂಗ್ ಆಗಿಲ್ಲ. ನಮ್ಮ ಮುಧೋಳ ಏನಿದೆ ಅದು ಸೇಡಂ ತಾಲ್ಲೂಕಿನಲ್ಲಿ ಬಹಳ ದೂರ ಇರತಕ್ಕಂಥ ಹೋಬಳಿಯಾಗಿದೆ. ಇದು ಆಂಧ್ರಪ್ರದೇಶಕ್ಕೆ ಹತ್ತಿರ ಇರತಕ್ಕಂಥ ಭಾಗವಾಗಿದೆ. ಅಲ್ಲಿ ಇರತಕ್ಕಂಥ community health centre ಗೆ ನೀವು ಡಾಕ್ಟರ್ ಕೊಡದೇ ಹೋದರೆ ಜನರ ಆರೋಗ್ಯವನ್ನು ಹೇಗೆ ಕಾಪಾಡುವುದು ? ಡಾಕ್ಟರ್ ಇಲ್ಲವೇ ಸುಮಾರು 40 ಹಳ್ಳಿಗಳ ಜನರಿಗೆ ಬಹಳ ತೊಂದರೆಯಾಗುತ್ತಿದೆ. ನಾನು ಇದರ ಬಗ್ಗೆ ಪದೇ ಪದೇ ಒಬ್ಬ ಶಾಸಕನಾಗಿ ಆದೂ ಅಲ್ಲದೇ ನಾನು ಒಬ್ಬ ವೈದ್ಯನಾಗಿ ನನ್ನ ಮತ ಕ್ಷೇತ್ರದ ಜನರಿಗೆ ಏನು ಉತ್ತರ ಕೊಡಬೇಕು ಹೇಳಿ. ಸ್ವತಃ ವೈದ್ಯನಾದ ನಾನು ಕಳೆದ ನಾಲ್ಕು ವರ್ಷದಿಂದಲೂ ಕೂಡ ಅಲ್ಲಿರುವ health centre ಗೆ ಒಬ್ಬ ಡಾಕ್ಟರ್‌ನ್ನು ನೇಮಕಾತಿ ಮಾಡಿಸುವುದಕ್ಕೆ ಆಗಿರುವುದಿಲ್ಲವೆಂದರೆ ನಾವು ಹೇಗೆ tolerate ಮಾಡಬೇಕು ಎಂಬುದನ್ನು ಅಧ್ಯಕ್ಷನಾದ ತಾವೇ ಹೇಳಬೇಕು. This is not the first time. ಸಾರ್ ನೀವು ಆಗ ಇರಲಿಲ್ಲ. This is the fourth time i am asking the same question.

ಶ್ರೀ ಡಿ.ವಿ. ಸದಾನಂದಗೌಡ:– ಒಂದ್ನಿಮಿಷ ಇದರ ಬಗ್ಗೆ ಕ್ಲಾರಿಫೈ ಮಾಡುತ್ತೇನೆ. ಮಾನ್ಯ ಶಾಸಕರು ಸ್ವತಃ ಡಾಕ್ಟರ್ ಆಗಿದ್ದಾರೆ..

ಶ್ರೀ ಸಿ.ಟಿ. ರವಿ :– ಡಾಕ್ಟರ್‌ರವರು ರಾಜಕೀಯಕ್ಕೆ ಬಂದಿರುವುದು ಒಂದು ಕಾರಣವಿರಬಹುದು. ಡಾಕ್ಟರ್‌ಗಳೆಲ್ಲರೂ ರಾಜಕೀಯಕ್ಕೆ ಬಂದರೆ ಆಸ್ಪತ್ರೆಗಳಲ್ಲಿ ಡಾಕ್ಟರ್ ಇರುವುದಿಲ್ಲ. ಅದೂ ಒಂದು ಕಾರಣವಿರಬಹುದು.

ಶ್ರೀ ಈ. ತುಕಾರಾಂ :– ಮಾನ್ಯ ಅಧ್ಯಕ್ಷರೆ, ಇದೊಂದು ಗಂಭೀರವಾದ ವಿಷಯವನ್ನು ಪ್ರಸ್ತಾಪ ಮಾಡಿದ್ದೇವೆ. ಕಳೆದ ಬಾರಿಯೂ ಕೂಡ ಕೇಳಿದ್ದೇವೆ.

ಅಧ್ಯಕ್ಷರು :– ಈಗ ನೀವು ಕುಳಿತುಕೊಳ್ಳಿ ಆಮೇಲೆ ಮಾತನಾಡುವಿರಂತೆ.

ಶ್ರೀ ಡಿ.ವಿ. ಸದಾನಂದಗೌಡ :– ಶ್ರೀ ಶರಣ ಪ್ರಕಾಶ್‌ರವರು ಸ್ವತಃ ಡಾಕ್ಟರ್‌ರಾಗಿರುವುದರಿಂದ ಅವರಿಗೆ ಇದರ ಬಗ್ಗೆ ಹೆಚ್ಚು ಮಾಹಿತಿಗಳಿವೆಯೆಂದು ನಾನು ತಿಳಿದುಕೊಳ್ಳುತ್ತೇನೆ. ತಮ್ಮ ಜೊತೆಯಲ್ಲಿಯೂ ಕೂಡ ಈ ವಿಷಯದ ಬಗ್ಗೆ ಚರ್ಚೆಗಳು ಆಗಿದೆಯೆಂದು ನಾನು ಕೇಳಿದ್ದೇನೆ. ವಿಶೇಷವಾಗಿ ಇವತ್ತು ಈ ವೈದ್ಯರುಗಳು ಗ್ರಾಮೀಣ ಪ್ರದೇಶಗಳಲ್ಲಿ ಸೇವೆ ಸಲ್ಲಿಸಲು ಹಿಂದೆಂಟು ಹಾಕುತ್ತಿರುವಂಥದ್ದನ್ನು ಇಡೀ ರಾಜ್ಯದಲ್ಲಿ ನಾವು ನೋಡುತ್ತಿದ್ದೇವೆ. ನಾನು ಒಂದು ಸಣ್ಣ ಉದಾಹರಣೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಈ ತಜ್ಞ ವೈದ್ಯರನ್ನು ನೇಮಕ ಮಾಡುವಂಥ ಕೆಲಸ ಕಾರ್ಯಗಳಿಗೆ ನಾವು ಕಳೆದ ವರ್ಷ ಪ್ರಾರಂಭ ಮಾಡಿದೆವು. ಸುಮಾರು 600 ತಜ್ಞ ವೈದ್ಯರ ಹುದ್ದೆಗೆ ನಾವು ಅರ್ಜಿಗಳನ್ನು ಆಹ್ವಾನ ಮಾಡಿದ್ದೆವು. ಸುಮಾರು 252 ಅರ್ಜಿಗಳು ನಮಗೆ ಬಂತು. ಆ 252 ಅರ್ಜಿಗಳನ್ನೂ ನಾವು ಪೂರ್ಣವಾಗಿ ಸ್ವೀಕಾರ ಮಾಡಿದೆ. 252 appointment ಮಾಡಿದವು. ಆದರೆ ಅದರಲ್ಲಿ counselling ಗೆ ಬಂದದ್ದು 137 ಅಭ್ಯರ್ಥಿಗಳು ಮಾತ್ರ. ಆ counselling ಗೆ ಬಂದವರಿಗೆ appointment order ಕೊಟ್ಟು ಡ್ಯೂಟಿಗೆ ಜಾಯಿನ್ ಆಗಿ ಎಂದು ಹೇಳಿದರೆ ಕೇವಲ 52 ಅಭ್ಯರ್ಥಿಗಳು ಮಾತ್ರ ಡ್ಯೂಟಿಗೆ ಬಂದಿದ್ದಾರೆ. ಆದುದರಿಂದ ವೈದ್ಯರಾಗಿರುವಂಥ ತಾವೇ ಇದಕ್ಕೆ ಉತ್ತರದ ಮದ್ದು ಕೊಡಬೇಕು ? ನನಗೆ ಮದ್ದು ಕೊಡುವುದಕ್ಕೆ ಬಹಳ ಕಷ್ಟವಾಗುತ್ತಿದೆ ಎನ್ನುವಂಥದ್ದನ್ನು ನೋಡುತ್ತಿದ್ದೀರಿ. ಇದಕ್ಕಾಗಿಯೇ ಹೊಸ ಕಾನೂನನ್ನು ತರುತ್ತಿದ್ದೇವೆ. ಇದಕ್ಕಾಗಿಯೇ ಇನ್ನು ಮುಂದೆ compulsory ಗ್ರಾಮೀಣ ಪ್ರದೇಶದಲ್ಲಿ ವೈದ್ಯರು ಇರಬೇಕು ಎಂದು ಹೇಳಿಯೇ ಯಾರು ಯಾರು post graduation ಮತ್ತು graduation ಮಾಡಿ ಡಾಕ್ಟರ್‌ಗಳು ಹೊರಗೆಬರುತ್ತಾರೋ ಅವರು compulsory ಒಂದು ವರ್ಷ ಕಾಲ ಗ್ರಾಮೀಣ ಪ್ರದೇಶದಲ್ಲಿ ಕೆಲಸ ಮಾಡಲೇಬೇಕು. ಅದಕ್ಕಾಗಿ ರಾಜ್ಯದ ಯಾವುದೇ

ಮೂಲೆಯಲ್ಲಿ ಬರುವ ವರ್ಷದ ನಂತರ ವೈದ್ಯರ ಕೊರತೆ ಪ್ರಶ್ನೆ ವಿಧಾನಸಭೆಯಲ್ಲಿ ಬರಬಾರದು ಎಂದು ಹೇಳುವಂಥದ್ದಕ್ಕೋಸ್ಕರ ಈ ಹೆಜ್ಜೆಯನ್ನು ಇಟ್ಟಿದ್ದೇವೆ. ಈಗಾಗಲೇ ಹೇಳಿದಂತೆ 600 ತಜ್ಞ ವೈದ್ಯರ ಹುದ್ದೆಗೆ ಕಾಲ ಮಾಡಿ 252 ಅರ್ಜಿಗಳು ಬಂದು ತದನಂತರದಲ್ಲಿ counselling ಗೆ 137 ಅಭ್ಯರ್ಥಿಗಳು ಬಂದು, ತದನಂತರದಲ್ಲಿ ಕೇವಲ 52 ವೈದ್ಯರು ಡ್ಯೂಟಿಗೆ ಬಂದಿರುವಂಥ ವಿಷಯ ನಿಮಗೂ ಗೊತ್ತಿದೆ. ನೀವೂ ಮತ್ತು ನಾವೆಲ್ಲರೂ ಒಂದು ದೊಡ್ಡ ಸಂಕಷ್ಟ ಪರಿಸ್ಥಿತಿಯಲ್ಲಿರುವುದನ್ನು ಕಂಡುಕೊಂಡಿದ್ದೇವೆ. ಹೀಗಾಗಿ ರಾಜ್ಯ ಸರ್ಕಾರ ಇದಕ್ಕೆ ಪರಿಹಾರವನ್ನು ಕಂಡುಕೊಳ್ಳುವುದಕ್ಕಾಗಿ ಗ್ರಾಮೀಣ ಪ್ರದೇಶದಲ್ಲಿ ವೈದ್ಯರು ಇರಬೇಕು ಎನ್ನುವುದಕ್ಕೆ ಹೆಚ್ಚು ಹೆಚ್ಚು ಒತ್ತು ಕೊಡುತ್ತಿದ್ದೇವೆ. ಈಗ ಸಾಮಾನ್ಯ ವೈದ್ಯಾಧಿಕಾರಿಗಳ 2586 ಹುದ್ದೆಗಳಿವೆ. ಅದರಲ್ಲಿ 250 ಹುದ್ದೆಗಳು ಪ್ರಸ್ತುತ ಖಾಲಿ ಇವೆ. ಇನ್ನೂ 2475 ಹಿರಿಯ ತಜ್ಞರು ನಮಗೆ ಬೇಕಾಗಿದ್ದಾರೆ. ಈಗ 1505 ಮಾತ್ರ ಇದ್ದಾರೆ. ಇಲ್ಲೇನಾಗಿದೆಯೆಂದರೆ, ಬೆಂಗಳೂರು, ಮೈಸೂರು ಮತ್ತು ಪಟ್ಟಣ ಪ್ರದೇಶಗಳಲ್ಲಿ ನಮಗೆ ತೊಂದರೆಯಾಗುವುದಿಲ್ಲ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ನಿಮ್ಮ ಮುಧೋಳದಂತಹ ಪ್ರದೇಶಗಳಿಗೆ ಇವತ್ತು ಡಾಕ್ಟರ್‌ಗಳು ಯಾರೂ ಹೋಗುವುದಕ್ಕೆ ಇಚ್ಛೆಪಡುವುದಿಲ್ಲ. ತಾವು ವೈದ್ಯರಾಗಿರುವುದರಿಂದ ಇಂಥವರೆನ್ನೆಲ್ಲ ಕರೆದು ಸ್ವಲ್ಪ ಅವರಿಗೆ ಹೇಳಿದರೆ ಏನಾದರೂ ಒಳ್ಳೆಯಾದಾಗಬಹುದೋ ಏನೋ ಗೊತ್ತಿಲ್ಲ ನನಗೆ. ಆದರೆ ನಾವು ಇವತ್ತು ಹಿರಿಯ ತಜ್ಞರಿಗೆ 70 ಸಾವಿರ ರೂಪಾಯಿಗಳ ಸಂಬಳವನ್ನು ಕೊಡುತ್ತಿದ್ದೇವೆ. NRHM Norms ಪ್ರಕಾರ 70 ಸಾವಿರ ರೂ ಸಂಬಳ ಕೊಟ್ಟು ನಾವು ಅವರನ್ನು ಕರೆಸಿಕೊಳ್ಳಬೇಕು ಎನ್ನುವಂಥ ಪ್ರಯತ್ನಗಳನ್ನು ಈಗಾಗಲೇ ನಾವು ಬ್ಯಾಕ್‌ವರ್ಡ್ ಏರಿಯಾಗಳಲ್ಲಿ ಮಾಡಿದ್ದೇವೆ. ಬ್ಯಾಕ್‌ವರ್ಡ್ ಏರಿಯಾಗಳಲ್ಲಿ ಡಾಕ್ಟರ್‌ಗಳು ಲಭ್ಯವಾಗುತ್ತಿಲ್ಲದ್ದಿರುವುದು ನಿಜವಾಗಿಯೂ ಒಂದು ಕಷ್ಟದ ಸಂಗತಿಯೇ ಆಗಿದೆ. ಆದರೆ ಮಾನ್ಯ ಸದಸ್ಯರಿಗೆ ನಾನು ಈ ಸಂದರ್ಭದಲ್ಲಿ ಭರವಸೆ ಕೊಡುತ್ತೇನೆ. ನೀವು ಮತ್ತು ನಾವೆಲ್ಲರೂ ಸೇರಿ ಬಜೆಟ್‌ನ್ನು ಅಪ್ರೂವ್ ಮಾಡುತ್ತೇವೆ. ಅದರಲ್ಲಿ ಹೇಳಿರುವಂತೆ ಗ್ರಾಮೀಣ ಪ್ರದೇಶದ ಜನರಿಗೆ ಆರೋಗ್ಯವನ್ನು ಕೊಡುವುದಕ್ಕೆ ಬೇಕಾದಂಥ ಒಂದು ವ್ಯವಸ್ಥೆಯನ್ನು ತರಲು ತೆಗೆದುಕೊಂಡಂಥ ಈ ಸರ್ಕಾರದ ನಿಲುವು ಬಹುಶಃ ಇದು ಇಡೀ ರಾಜ್ಯದ ಆರು ಕೋಟಿ ಜನರು ಶಹಭಾಷ್‌ಗಿರಿ ಕೊಡುತ್ತಾರೆಂದು ನಾನು ಭಾವಿಸುತ್ತೇನೆ. ತಾವು ಇದರಲ್ಲಿ ಮುಂಚೂಣಿಯಲ್ಲಿ ನಿಂತು ಶಹಭಾಸ್‌ಗಿರಿ ಕೊಟ್ಟರೆ ಮುಂದಿನ ದಾರಿ ಈ ಸದನದಲ್ಲಿ ಇಂಥ ಪ್ರಶ್ನೆಗಳನ್ನು ನೀವು ಎತ್ತುವುದಕ್ಕೆ ಸಾಧ್ಯವಾಗುವುದಿಲ್ಲ. ಆ ರೀತಿಯ ಕೆಲಸ

ಕಾರ್ಯಗಳನ್ನು ನಾವೆಲ್ಲರೂ ಮಾಡೋಣ. ಈಗಾಗಲೇ ತಾತ್ಕಾಲಿಕವಾಗಿ ಒಬ್ಬರು ಸ್ಪೆಷಲಿಸ್ಟ್‌ರವರನ್ನು ದಿನಾಂಕ 29–02–2012 ಕ್ಕೆ ಅಲ್ಲಿಗೆ ನೇಮಕ ಮಾಡಲಾಗಿದೆ. ಈಗಾಗಲೇ ತತ್ಸಂಬಂಧ ಆದೇಶಗಳನ್ನು ಕೊಡಲಾಗಿದೆ.

ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ :– ಆದರೆ ಅವರು ಇನ್ನೂ ಬಂದಿಲ್ಲ.

ಶ್ರೀ ಡಿ.ವಿ. ಸದಾನಂದ ಗೌಡ :– ಬಂದಿಲ್ಲವೆಂದು ಹೇಳುವಂಥದ್ದಕ್ಕೆ ನೀವು ಉತ್ತರವನ್ನು ಹೇಳಬೇಕು. ಅಲ್ಲಿಯ ಜಿಲ್ಲಾಧಿಕಾರಿಗಳ ಮುಖಾಂತರ ಕಾಂಟ್ರ್ಯಾಕ್ಟ್ ಬೇಸಿಸ್ ಮೇಲೆ ನೇಮಕಾತಿ ಮಾಡಿಕೊಂಡು ದಿನಾಂಕ 29–02–2012ಕ್ಕೆ ಆದೇಶ ಪತ್ರವನ್ನು ಕೂಡ ಕೊಡಲಾಗಿದೆ. 29–03–2012 ಕ್ಕೆ ಆದೇಶ ಪತ್ರ ಕೊಟ್ಟು ಒಂದು ತಿಂಗಳಾಗುತ್ತದೆ. ಇದುವರೆಗೂ ಅವರು ಬಂದಿಲ್ಲ. ಆದುದರಿಂದ ಬರುವಂಥ ಮುಂದಿನ ದಿನಗಳಲ್ಲಿ ಇದನ್ನು ಸರಿ ಮಾಡುವಂಥ ಕೆಲಸಗಳನ್ನು ಮಾಡುತ್ತೇವೆ. ಖಂಡಿತವಾಗಿ ಸರ್ಕಾರಕ್ಕೆ ಜನಗಳ ಆರೋಗ್ಯದ ಬಗ್ಗೆ ಕಾಳಜಿ ಇದೆ. ಕಳೆದ ಒಂದು ವರ್ಷದಲ್ಲಿ ನೀವು ನೋಡಿರಬಹುದು. ಮೆಡಿಸನ್ ಪರ್ಚೆಸ್‌ಗೆ ಬೇಕಾದಂಥ ಬೇರೆ ಬೇರೆ ಹಂತಗಳಲ್ಲಿ ಲೋಕಲ್ ಆಸ್ಪತ್ರೆಗಳಲ್ಲಿಯೂ ಕೂಡ ಮೆಡಿಸನ್ ಪರ್ಚೇಸ್ ಮಾಡುವಂಥದ್ದು, ಯಾವುದಾದರೂ ಪಕ್ಕದ ಆಸ್ಪತ್ರೆಯಲ್ಲಿ ಒಬ್ಬ ಡಾಕ್ಟರ್ ಇದ್ದರೆ ಅವರನ್ನು ವಾರಕ್ಕೆ ಮೂರು ದಿನ ಇನ್ನೊಂದು ಆಸ್ಪತ್ರೆಗೆ ಕಳುಹಿಸಿಯಾದರೂ ಆ ಭಾಗದ ಜನರಿಗೆ ಆರೋಗ್ಯ ತಪಾಸಣೆಯನ್ನು ಮಾಡಿಸಬೇಕು ಎನ್ನುವಂಥದ್ದಕ್ಕೆ ಪ್ರಯತ್ನಗಳನ್ನು ತೆಗೆದುಕೊಳ್ಳಲಾಗಿದೆ. ಇನ್ನೂ ನೇಮಕಾತಿಗೆ ಸಂಬಂಧಪಟ್ಟಂತೆ ಕಾಂಟ್ರ್ಯಾಕ್ಟ್‌ಗೆ ಬೇಸಿಸ್ ಮೇಲೆ ಪ್ರತಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳಿಗೆ ವಿಶೇಷವಾದ ಅಧಿಕಾರವನ್ನು ಕೊಟ್ಟು ವೈದ್ಯರನ್ನು ನೇಮಕಾತಿ ಮಾಡಿಕೊಂಡಿರುವಂಥದ್ದು ನಡೆದಿದೆ. ಈ ರೀತಿ ಜನರ ಆರೋಗ್ಯದ ಬಗ್ಗೆ ಒಂದು ವಿಶೇಷವಾದಂಥ ಕಾಳಜಿಯನ್ನು ತೆಗೆದುಕೊಂಡಿದ್ದೇವೆ. ಈಗ ನಮ್ಮೆಲ್ಲರ ಕಾಳಜಿ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯೆ ಮತ್ತು ಆರೋಗ್ಯಕ್ಕೆ ಹೆಚ್ಚಿನ ಒತ್ತು ಕೊಡುವಂಥ ವ್ಯವಸ್ಥೆಗಳು ಸಮಾಜದಲ್ಲಿ ನಡೆಯಬೇಕು ಎಂದು ಹೇಳುವಂತದ್ದಾಗಿದೆ. ಇದರ ಬಗ್ಗೆ ಕಾಳಜಿ ವಹಿಸಿ ಕೆಲಸಗಳನ್ನು ಮಾಡುತ್ತೇವೆ. ಇನ್ನು ಮುಂದಿನ ದಿನಗಳಲ್ಲಿ ಇದು ಆಗಬಹುದು ಎನ್ನುವ ವಿಶ್ವಾಸ ನನಗಿದೆ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ನನ್ನ ವಿನಂತಿಯೆಂದರೆ, ಈ ಕಾರ್ಯವನ್ನು ಆದಷ್ಟು ಶೀಘ್ರದಲ್ಲಿ ತಾವು ಮಾಡಬೇಕು. ಇದೇ ಸದನದಲ್ಲಿ ಈ ಬಗ್ಗೆ ಬಿಲ್ ತರಬೇಕಾಗಿತ್ತು. ನೀವು ಏನು ಆಮೆಂಡ್‌ಮೆಂಟ್ ತರುತ್ತಿದ್ದೀರಿ. ಅದರಲ್ಲಿ post graduate ಕಡ್ಡಾಯವಾಗಿ ಗ್ರಾಮೀಣ ಪ್ರದೇಶದಲ್ಲಿ ಸೇವೆ

ಮಾಡಬೇಕೆಂದು ಏನು ಮಾಡುತ್ತಿದ್ದೀರಿ. ಅದಕ್ಕೆ ಸಂಬಂಧಪಟ್ಟಂತೆ ಬಿಲ್ ಅನ್ನು ಈಗ ನಡೆಯುತ್ತಿರುವ ಅಧಿವೇಶನದಲ್ಲಿಯೇ ತರುತ್ತೀರೆಂದು ನಾನಂದುಕೊಂಡಿದ್ದೆ. ಈ ಅಧಿವೇಶನದಲ್ಲಿಯೇ ಅದನ್ನು ತೊಂದರೆ ಈಗಲೇ ಅದನ್ನು ಪಾಸ್ ಮಾಡಕೊಡುತ್ತೇವೆ. ಏಕೆಂದರೆ ಈ ವಿಚಾರ in the interest of the state ಆಗಿದೆ. ಆದುದರಿಂದ ಇನ್ನು ಎರಡು ದಿನಗಳಲ್ಲಿ ಆ ಬಿಲ್ ತೆಗೆದುಕೊಂಡು ಬನ್ನಿ.

ಶ್ರೀ ಡಿ.ವಿ. ಸದಾನಂದ ಗೌಡ :– ಇವತ್ತು ನೀವು ಬಜೆಟ್ ಪಾಸ್ ಮಾಡಿ. ಆದಷ್ಟು ಬೇಗ G.O. issue ಮಾಡುವಂಥ ಪ್ರಯತ್ನಗಳನ್ನು ನಾನು ಮಾಡುತ್ತೇನೆ.

ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ಈಗ ಬಿಲ್ ತರದಿದ್ದರೂ ಈ ಸದನ ಮುಗಿದ ಮೇಲೆ ನೀವು ordiance pass ಹೊರಡಿಸಿ ನೀವು ಅದನ್ನು ತನ್ನಿ.

ಶ್ರೀ ಡಿ.ವಿ. ಸದಾನಂದ ಗೌಡ :– ಈ ಸದನ ಮುಗಿದ ತಕ್ಷಣ oridance pas ಮಾಡುತ್ತೇವೆ.

ದೇವಸ್ಥಾನಗಳ ಕಾಮಗಾರಿಗಳ ವಿವರ
38 : (247)

ಶ್ರೀ ಅಮರೇಶ್ (ಮುಳಬಾಗಿಲು)

ಅ) ಮುಜರಾಯಿ ಇಲಾಖೆಯಿಂದ 2009–10, 2010–11 ಮತ್ತು 2011–12ನೇ ಸಾಲಿನಲ್ಲಿ ನಿಗದಿಪಡಿಸಿದ ಅನುದಾನವೆಷ್ಟು (ವಿವರ ನೀಡುವುದು)

ಆ) ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿಗೆ ಈ 3 ವರ್ಷಗಳಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ಹಾಗೂ ಯಾವ ಕಾಮಗಾರಿಗಳಿಗೆ ಬಿಡುಗಡೆ ಮಾಡಲಾಗಿದೆ. (ವಿವರ ನೀಡುವುದು)

ಇ) ಈ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಯಾವ ಯಾವ ಕಾಮಗಾರಿಗಳಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ (ಜಿಲ್ಲಾವಾರು) ಹಾಗೂ ತಾಲ್ಲೂಕುವಾರು ವಿವರ ನೀಡುವುದು.

ಈ) 2011–12ನೇ ಸಾಲಿನಲ್ಲಿ ಎಷ್ಟು ಹಣ ನಿಗದಿ ಮಾಡಲಾಗಿದೆ ಹಾಗೂ ಯಾವ ಯಾವ ಕಾಮಗಾರಿಗಳಿಗೆ ಎಷ್ಟು ಹಣ ನಿಗದಿಪಡಿಸಲಾಗಿದೆ. (ವಿವರ ನೀಡುವುದು)